ಶಾಲೆಯ ಟಾಪರ್ ಎಂದು ಹೆಸರು ಪಡೆದಿದ್ದ ನನ್ನ ಮುದ್ದಿನ ಮಗ ನಿನಾದನ ನಡವಳಿಕೆ ಬದಲಾಗಿರುವುದು ನಿಜವಾದರೂ ಅದನ್ನು ದೈವದ ಚೇಷ್ಟೆ ಎಂದು ಒಪ್ಪಿಕೊಳ್ಳಲು ನಾನು ಸಿದ್ಧಳಿರಲಿಲ್ಲ. ರಾತ್ರಿ ಪಕ್ಕದಲ್ಲಿ ಮಲಗಿದ್ದ ಮಗ ಎಲ್ಲಿ ಹೋದ ಎಂದು ಹೇಳುವುದು ಬಿಟ್ಟು ಬೇರೇನೋ ಮಾತನಾಡಲು ಹೊರಟ ತಾಯಿಯ ಮೇಲೆ ರೇಗಿತು.

'ಅದಿರ್ಲಿ, ನಿನಾದ್ ಎಲ್ಲಿ ಅಂತ ಹೇಳಮ್ಮ....' ಕಾತುರದಿಂದ ಪ್ರಶ್ನಿಸಿದೆ.

'ಅದೇ ಹೇಳಿದ್ನಲ್ಲ ನೇತ್ರ, ಇನ್ನು ನಿನ್ಮಗನ ಆಸೆ ಬಿಟ್ಬಿಡು, ಎಲ್ಲಾ ಮುಗಿದು ಹೋಯ್ತು ಅಂತ್ಲೇ ಇಟ್ಕೋ...'

ಅಮ್ಮನ ನಿರ್ವಿಕಾರ ಧ್ವನಿಗೆ ಬೆಚ್ಚಿದೆ. ಅಂದರೆ ಏನು ಅಮ್ಮನ ಮಾತಿನರ್ಥ? ಏನಾಯಿತು ನನ್ನ ಮಗನಿಗೆ? ಇದುವರೆಗೆ ತಡೆ ಹಿಡಿದಿದ್ದ ಅಳು ಒತ್ತರಿಸಿ ಬಂದು ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದ್ದೆ.

'ಅಮ್ಮ, ದೀದಿ ಮೊದ್ಲೇ ಆತಂಕದಲ್ಲಿದ್ದಾರೆ, ನೀವು ಏನೇನೋ ಮಾತನಾಡಿ ಅವ್ರ ಸಂಕಟಾನ ಜಾಸ್ತಿ ಮಾಡ್ಬೇಡಿ...' ಒಳ ಬಂದ ಪೂನಂ ಅಮ್ಮನನ್ನು ಸಲಿಗೆಯಿಂದ ಗದರಿ ನನ್ನ ಕೈಯ್ಯನ್ನು ಆತ್ಮೀಯತೆಯಿಂದ ಹಿಡಿದಳು.

'ಬೆಳಿಗ್ಗೇನೇ ಶರತ್ ಭೈಯ್ಯ ಬಂದಿದ್ರು, ನಿನಾದ್ ಬೇಗನೆದ್ದು ಮಂಕಾಗಿ ಓಡಾಡಿಕೊಂಡಿದ್ದ. ಅವ್ನನ್ನು ಜೊತೆಗೆ ಕರ್ಕೊಂಡು ಹೋದ್ರು. ನೀವೇನೂ ಯೋಚ್ನೆ ಮಾಡ್ಬೇಡಿ ದೀದಿ, ಶರತ್ ಭೈಯಾನೇ ಎಲ್ಲಾ ನೋಡ್ಕೋತಾರೆ, ನಿಮ್ಮ ಮಗ ಮೊದಲಿನಂತೆ ಚುರುಕಾಗ್ತಾನೆ ನೋಡ್ತಿರಿ....' ಎಂದು ಧೈರ್ಯ ತುಂಬಿದಳು ಪೂನಂ.

ಅವಳನ್ನೇ ಇಬ್ಬನಿ ತುಂಬಿದ ಕಂಗಳಿಂದ ನೋಡಿದೆ.

ನಿಜವಾದ ಸ್ನೇಹಕ್ಕೆ ಯಾವ ಬೇಲಿಯ ಹಂಗೂ ಬೇಕಿಲ್ಲವೆಂದು ಸಾಬೀತುಪಡಿಸಿದವಳು ಈ ಪೂನಂಳಲ್ಲವೇ? ಸರಿಯಾಗಿ ಎಂಟು ವರ್ಷಗಳ ಹಿಂದೆ ನಾನು ಸೇರಿದ್ದ ಕಂಪೆನಿಗೆ ಮಹಾರಾಷ್ಟ್ರದಿಂದ ಬಂದು ಸೇರಿಕೊಂಡವಳು. ಆಗಷ್ಟೇ ಮದುವೆಯಾಗಿ ಹೊಸ ಜೀವನ ಆರಂಭಿಸಿದ್ದ ಅವಳಿಗೂ, ಹೊಸ ಜೀವನ ರಂಗನ್ನು ಪೂರ್ತಿಯಾಗಿ ಕಳೆದುಕೊಂಡು ಅನಿವಾರ್ಯವಾಗಿ ದುಡಿಯಲೇಬೇಕಾದ ನನಗೂ ಅಜಗಜಾಂತರ ವ್ಯತ್ಯಾಸವಿತ್ತು. ಆದರೂ ನಮ್ಮಿಬ್ಬರನ್ನು ಬೆಸೆದಿದ್ದು ನಿರ್ಮಲವಾದ ಸ್ನೇಹ. ಬಂದ ಎರಡು ವರ್ಷದೊಳಗೆ ಮುದ್ದಾದ ಮಗಳಿಗೆ ಜನ್ಮವಿತ್ತು, ಕನ್ನಡವನ್ನು ಸೊಗಸಾಗಿ ಕಲಿತು ಕನ್ನಡದವಳೇ ಆದವಳು ಪೂನಂ. ನಮಗಿಬ್ಬರಿಗೆ ನಾಲ್ಕೈದು ವರ್ಷಗಳ ವ್ಯತ್ಯಾಸವಿರಬಹುದು. ನನ್ನನ್ನು ಪ್ರೀತಿಯಿಂದ 'ದೀದಿ' ಎಂದೇ ಕರೆಯುತ್ತಾಳೆ. ರಕ್ತ ಸಂಬಂಧವನ್ನೂ ಮೀರಿದ ಸ್ನೇಹ ಸಂಬಂಧ ನಮ್ಮನ್ನು ಗಟ್ಟಿಗೊಳಿಸಿ ಬಾಂಧವ್ಯದ ಬೆಸುಗೆ ಹಾಕಿದೆ.

ಈಗಲೂ ಅಷ್ಟೆ. ಪೂನಂಳ ಅಣ್ಣನ ಮಗಳ ಮದುವೆ ಮಹಾರಾಷ್ಟ್ರದ ಪುಣೆಯಲ್ಲಿತ್ತು. ನಮ್ಮನ್ನು ಬರಲೇಬೇಕೆಂದು ಬಲವಂತಪಡಿಸಿ

**ಸಾವಿನ ಆಟವನ್ನು ಆಡಿ ಕೊನೆಗೂ ಜೀವನದ ಹಾದಿಗೆ ಹಿಂದಿರುಗಿದ್ದ ಮಗನನ್ನು ನೆನೆದು ನೇತ್ರಾಳ ಹೃದಯ ಸಂಭ್ರಮಿಸಿತು. ಮೊದಲ ಬಾರಿಗೆ ಒಂದು ಮಾಸದ ಮುಗುಳ್ನಗು ಆಕೆಯ ಮುಖದಲ್ಲಿ ಮೂಡಿದ್ದರೆ, ಸೂರ್ಯ ಹೊಂಬಣ್ಣದಿಂದ ಹೊಳೆಯುತ್ತಾ ಭುವಿಗೆ ಹೊಂಗಿರಣಗಳ ಜರಿಸೀರೆಯನ್ನು ಉಡಿಸತೊಡಗಿದ್ದ.**

ಹೊರಡಿಸಿಯೇ ಬಿಟ್ಟಿದ್ದಳು ಪೂನಂ. ಮದುವೆ ಮುಗಿದ ಮೇಲೆ ನಮಗೆ ಪುಣೆಯ ಸುತ್ತಮುತ್ತಲಿನ ಪ್ರೇಕ್ಷಣೀಯ ಜಾಗಗಳನ್ನು ತೋರಿಸಬೇಕೆಂದು ನಮ್ಮೊಂದಿಗೆ ಅಣ್ಣನ ಮನೆಯಲ್ಲೇ ಉಳಿದುಕೊಂಡಿದ್ದಳು. ಅವಳಿಗೆ ಆರು ವರ್ಷದ ಮಗಳಿದ್ದಾಳೆ. ಪೂನಂ ಅತ್ಯುತ್ತಮ ಗೆಳತಿಯೂ ಹೌದು, ಸಹೋದರಿಯೂ ಹೌದು.

ಪೂನಂ ಮತ್ತೆ ಮತ್ತೆ ಸಮಾಧಾನಪಡಿಸಿದಾಗ ಮನಸ್ಸು ಸ್ವಲ್ಪ ಸ್ಥಿಮಿತಕ್ಕೆ ಬಂದಿತು. ಅವಳ ಅಣ್ಣ ಅತ್ತಿಗೆಯೂ ನನ್ನ ಉಪಚಾರಕ್ಕೆ ನಿಂತಾಗ ಹೃದಯ ಹಿಡಿಯಾಯಿತು. ನಾಲ್ಕು ದಿನಗಳ ಹಿಂದೆ ಮದುವೆಯ ಸಂಭ್ರಮದಿಂದ ತುಂಬಿ ತುಳುಕುತ್ತಿದ್ದ ಮನೆಯಲ್ಲವೇ ಇದು? ನಮ್ಮ ಕಾರಣದಿಂದ ಅವರ ಸಂಭ್ರಮ ಮಣ್ಣು ಪಾಲಾಗಿದೆಯೆನಿಸಿ ಮನಸ್ಸು ಕಹಿಯಾಯಿತು.

ಏನಾಗಿದೆ ಮುದ್ದಿನ ಮಗನಿಗೆ? ಬರಡಾದ ಬದುಕಿಗೆ ಒಂದೇ ಒಂದು ಆಸೆಯ ಬೆಳಕು ಈ ನನ್ನ ಕಂದ. ಹನ್ನೊಂದು ವರ್ಷದ ಮಗ ಮುಂದಿನ ವರ್ಷವೇ ಏಳನೇ ತರಗತಿಗೆ ಹೋಗುವವನಿದ್ದಾನೆ. ಪೂನಂ ಮದುವೆಗೆ ಕರೆದಾಗ ಅಮ್ಮನೊಂದಿಗೆ ಅವನೂ ಹೊರ ರಾಜ್ಯವನ್ನು ನೋಡಿದಂತಾಗುತ್ತದೆಂದು ಯೋಚಿಸಿ ಪುಣೆಗೆ ಹೊರಡುವ ನಿರ್ಧಾರ ಮಾಡಿದ್ದೆ. ಅವರಿಬ್ಬರಿಗೂ ಅದು ಮೊದಲ ವಿಮಾನದ ಪಯಣ. ವಿಮಾನ ಹಕ್ಕಿಯಂತೆ ಮೇಲೇರುವುದನ್ನೂ, ದಂತದ ಗೊಂಬೆಯಂತಹ ಗಗನ ಸಖಿಯರನ್ನೂ, ಹತ್ತಿಯ ಉರುಳೆಯಂತಹ ಮೋಡದ ರಾಶಿಯನ್ನು ಸೀಳಿಕೊಂಡು ವಿಮಾನ ಹಗುರವಾಗಿ ಹಾರುವುದನ್ನೂ ನೋಡಿ ಅಮ್ಮ ರೋಮಾಂಚಿತಳಾಗಿದ್ದರೆ, ನಿನಾದನಲ್ಲಿ ಯಾವ ಉತ್ಸಾಹವೂ ಇರಲಿಲ್ಲ. ಏನೋ ಕಳೆದುಕೊಂಡವನಂತೆ ಮಂಕಾಗಿ ಕುಳಿತಿದ್ದ.

ಮದುವೆಯೇನೋ ವಿಜೃಂಭಣೆಯಿಂದ ನಡೆದಿತ್ತು. ಮರಾಠಿಯವರ ಮದುವೆ ಆಕರ್ಷಕವಾಗಿ, ವಿಭಿನ್ನವಾಗಿ ಕಂಡಿತ್ತು ನನಗೆ. ಮದುವೆಯ ಹಿಂದಿನ ದಿನ ಸಂಗೀತ ಕಾರ್ಯಕ್ರಮವಿತ್ತು. ಬಿಗುಮಾನ ಮರೆತು ಭಾವೀ ವಧು ವರರು ಸಿನಿಮಾ ಹಾಡುಗಳಿಗೆ ಹೆಜ್ಜೆ ಹಾಕಿದ್ದರೆ, ನಾವೆಲ್ಲರೂ ಅವರಿಗೆ ಸಾಥ್ ನೀಡಿದ್ದೆವು. ಮದುವೆಯ ದಿನ ವಧುವನ್ನು ಸಿಂಗರಿಸಿದ ಮಂಟಪದೊಳಗೆ ನಿಲ್ಲಿಸಿ ಮದುವೆಯ ಮಂಟಪಕ್ಕೆ ಕರೆತಂದಿದ್ದರು. ಮದುವೆಗೆ ಆಗಮಿಸಿದ್ದ ಗಂಡಸರೆಲ್ಲರಿಗೂ ತುರಾಯಿಯಂತಹ ಪೇಟವನ್ನು ಕಟ್ಟಿದ್ದರು. ಮಗನಿಗೂ ಪೂನಂ ಬಲವಂತದಿಂದ ಪೇಟವನ್ನು ಕಟ್ಟಿಸಿದ್ದಳು. ಹಿಂದಿನಿಂದ ಕುರ್ಚಿಯಲ್ಲಿ ಕುಳಿತ ಗಂಡಸರನ್ನು ನೋಡುತ್ತಿದ್ದರೆ ಬಣ್ಣದ ರೆಕ್ಕೆಯ ಹಕ್ಕಿಗಳು ವಿಶ್ರಮಿಸುತ್ತಿದ್ದಂತೆ ಕಾಣುತ್ತಿತ್ತು. ವೈವಿಧ್ಯಮಯವಾದ ಊಟೋಪಚಾರಗಳಿಂದ ಪುಣೆಯ ಮದುವೆ ಮನಸ್ಸಿನಾಳದಲ್ಲಿ ಅಚ್ಚೊತ್ತಿತ್ತು. ಆದರೆ ಈ ಎಲ್ಲಾ ಸಂಭ್ರಮಗಳು ತನಗಲ್ಲವೆನ್ನುವಂತೆ ಮಂಕಾಗಿಯೇ ಇದ್ದ ನಿನಾದ್. ಅವನ ವಿಚಿತ್ರ ನಡವಳಿಕೆಗೆ ಕಾರಣವೇನಿರ ಬಹುದೆಂದು ಯೋಚಿಸಿ ಮನಸ್ಸು ಆತಂಕಗೊಳ್ಳತೊಡಗಿತ್ತು.

ಎರಡು ದಿನಗಳಿಂದ ನಡೆದ ಘಟನಾವಳಿಗಳು ಚಿತ್ರಪಟಗಳಂತೆ ಕಣ್ಮುಂದೆ ತೆರೆದು ಕೊಳ್ಳತೊಡಗಿದ್ದವು.

ಮೊದಲು ನಮ್ಮ ಸವಾರಿ ಪೂನಂ ಹಾಗೂ ಅವಳ ಮಗಳ ಜೊತೆ ಮಾಡಿಕೊಂಡು ಶಿರಡಿ ಸಾಯಿಬಾಬಾ ಮಂದಿರಕ್ಕೆ ಹಾಗೂ ಜ್ಯೋತಿರ್ಲಿಂಗವಿರುವ ಭೀಮಾ ಶಂಕರಕ್ಕೆ ಭೇಟಿ ಕೊಟ್ಟಿತ್ತು. ಮಹಾನ್ ಸಂತನಾಗಿ, ಪ್ರತ್ಯಕ್ಷ ದೈವವಾಗಿ, ನಂಬಿದ ಭಕ್ತರನ್ನು ಉದ್ಧರಿಸುವ ಸಾಯಿಬಾಬಾರ ಶಾಂತಮೂರ್ತಿ ಮನಸ್ಸಿಗೆ ತಂಪೆರೆದರೆ, ಜ್ಯೋತಿರ್ಲಿಂಗ ಸ್ವರೂಪನಾಗಿ ಜಗತ್ತಿಗೆ ಬೆಳಕನ್ನು ನೀಡುವ ಈಶ್ವರ ಭೀಮಾಶಂಕರನಾಗಿ, ನಂಬಿ ಬಂದ ಭಕ್ತರನ್ನು ಪೊರೆಯುತ್ತಿದ್ದ. ಪ್ರಾಚೀನವಾದ, ಕಡಿದಾದ ಮೆಟ್ಟಿಲುಗಳನ್ನು ಇಳಿದ ಮೇಲೆ ಸಿಗುವ ಶಿವನ ದೇವಾಲಯ ಗಮನ ಸೆಳೆದಿತ್ತು. ನಿನ್ನೆ ಬೆಳಿಗ್ಗೆ ಪೂನಂಳ ಅತ್ತಿಗೆ ಮಾಡಿಕೊಟ್ಟ ಮಹಾರಾಷ್ಟ್ರದ ಸ್ವಾದಿಷ್ಟ ತಿನಿಸು ಪೋಹಾವನ್ನು ಸೇವಿಸಿ ಟ್ಯಾಕ್ಸಿ ಮಾಡಿಕೊಂಡು ಮತ್ತೆ ಹೊರಟಿದ್ದೆವು.

ದಾದಾವಾಡಿಯಲ್ಲಿರುವ ಲಕ್ಷ್ಮಿಯ ಮನೋಹರ ವಾದ ದೇವಸ್ಥಾನವನ್ನು ನೋಡಿಕೊಂಡು, ಪಾರ್ವತಿ ಪೇಟ್‌ನಲ್ಲಿರುವ ಪಾರ್ವತಿ ಹಿಲ್ಸ್‌ಗೆ ಭೇಟಿ ಕೊಟ್ಟಿದ್ದೆವು. 108 ಕಡಿದಾದ ಮೆಟ್ಟಿಲುಗಳನ್ನು ಪ್ರಯಾಸದಿಂದ ಹತ್ತಿ, ಪಾರ್ವತಿಯ ಬಳಗದ ದೇವಾಲಯದ ಸಮೂಹವನ್ನು ನೋಡಿಕೊಂಡು, ಅಲ್ಲೇ ಇರುವ ಪೇಶ್ವೆಯರ ಕಾಲದ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿ ಹೊರಡುವ ವೇಳೆಗೆ ಆಗಲೇ ಮಧ್ಯಾಹ್ನವಾಗಿತ್ತು. ಕೆಳಗಿಳಿದು ರೆಸ್ಟೊರೆಂಟ್ ಒಂದರಲ್ಲಿ ಊಟ ಮುಗಿಸಿ, ಪೇಶ್ವೆಯರಿಗೆ ಸಂಬಂಧಪಟ್ಟ ಮೂರು ಅಂತಸ್ತುಗಳಲ್ಲಿ ಹರಡಿಕೊಂಡ ರಾಜಾ ದಿನಕರ್ ಕೇಲ್ಕರ್ ವಸ್ತು ಸಂಗ್ರಹವನ್ನೂ ನೋಡಿಕೊಂಡು